5. ದ್ವಿಸಂತತಿ ಹಾಗೂ ಬಹುಸಂತತಿ ರೇಷ್ಮೆ ಮೊಟ್ಟೆಗಳ ಪಿ4 ನಿರ್ವಹಣೆ ಮತ್ತು ಇಲಾಖೆಗೆ ಪಿ3 ಮೊಟ್ಟೆಗಳ ವಿತರಣೆ.

6. ಹುಳು ಸಾಕಾಣೆ ಮಾಡುವ ಮನೆಯ ವಿನ್ಯಾಸ ಮತ್ತು ಸಲಹೆ.

7. ನೂಲು ಬಿಚ್ಚಾಣಿಕಾ ನೀರಿನ ಪರೀಕ್ಷೆ ಮತ್ತು ಸರಿಪಡಿಸುವ ವಿಧಾನಗಳ ಶಿಫಾರಸ್ಸು.

8. ರೇಷ್ಮೆ ದಾರದ ಪರೀಕ್ಷೆ.

9. ರೇಷ್ಮೆ ಬಟ್ಟೆಯ ಪರೀಕ್ಷೆ.

10. ತಾಂತ್ರಿಕ ವಿಷಯಗಳ ಬಗ್ಗೆ ತರಬೇತಿ ನೀಡುವುದು.

ವಿಷಯ :- ಕುಂದಾಪುರ ಪುರಸಭೆಯಿಂದ ಮಂಜೂರಾದ ನಿವೇಶನಗಳ ಸಂಖ್ಯೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 827 (1625)

ಶ್ರೀ ಪ್ರತಾಪ ಚಂದ್ರ ಶೆಟ್ಟಿ, (ಕುಂದಾಪುರ) :- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಕಳೆದ ಒಂದು ವರ್ಷದಲ್ಲಿ ಕುಂದಾಪುರ ಪುರಸಭೆಯಿಂದ ಮಂಜೂರಾದ ನಿವೇಶನಗಳು ಎಷ್ಟು?

ನಿವೇಶನ ಮಂಜಾರಾದ ಪೂರ್ಣ ವಿವರ ಒದಗಿಸುವುದು.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ಸಚಿವರು) :-

ಅ) ಒಂದು. ಬಡೇರ ಹೋಬಳಿ ಗ್ರಾಮದ ಭರತ ಕಾಲೋನಿಯ ಆಶ್ರಯ ನಿವೇಶನ ಸಂಖ್ಯೆ 109 ನ್ನು ಪರಿಶಿಷ್ಟ ಜಾತಿಗೆ ಸೇರಿದ ಶ್ರೀಮತಿ ಚಿಕ್ಕಮ್ಮನವರಿಗೆ ಮಂಜೂರು ಮಾಡಿದ್ದು ಹಕ್ಕುಪತ್ರವನ್ನು ವಿತರಿಸಲಾಗಿದೆ.

ವಿಷಯ :- ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಅರೆಯುವ ಸಾಮರ್ಥ್ಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 829 (1142)

ಶ್ರೀ ಡಿ. ಆರ್. ಪಾಟೀಲ್ (ಗದಗ) :- ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ವರ್ಷ ರಾಜ್ಯದಲ್ಲಿ ಉತ್ಪಾದನೆಯಾದ ಒಟ್ಟು ಕಬ್ಬಿನ ಪ್ರಮಾಣವೆಷ್ಟು? ರಾಜ್ಯದಲ್ಲಿ ಇರುವ ಕಬ್ಬು ಅರೆಯುವ ಸಾಮರ್ಥ್ಯ ಎಷ್ಟು?

ಆ) ಸಹಕಾರಿ, ಖಾಸಗಿ ಹಾಗೂ ಸಾರ್ವಜನಿಕ ಕ್ಷೇತ್ರದಲ್ಲಿ ಇರುವ ಕಬ್ಬು ಅರೆಯುವ ಸಾಮರ್ಥ್ಯವೆಷ್ಟು?

ಇ) ಕಾರ್ಖಾನೆಗಳ ಕಬ್ಬು ಅರೆಯುವ ಸಾಮರ್ಥ್ಯದ ಬಳಕೆ ಪ್ರಮಾಣ ಎಷ್ಟು? ಅತಿ ಹೆಚ್ಚು ಸಾಮರ್ಥ್ಯ ಅತೀ ಕಡಿಮೆ ಸಾಮರ್ಥ್ಯ ಹೊಂದಿದ ಕಾರ್ಖಾನೆಗಳು ಎಷ್ಟು?

ಈ) ರಾಜ್ಯದಿಂದ ಎಷ್ಟು ಕಬ್ಬು ಬೇರೆ ರಾಜ್ಯಗಳಿಗೆ ಕಳುಹಿಸಲಾಗಿದೆ ಹಾಗೂ ಕಬ್ಬು ಬೇರೆಡೆ ಸಾಗಿಸದೇ ರಾಜ್ಯದಲ್ಲಿ ನುರಿಸಲಾಗದೆ ಹಾಳಾದ ಒಟ್ಟು ಕಬ್ಬು ಈ ಹಾನಿಯನ್ನು ತುಂಬಿಕೊಡಲು ಸರ್ಕಾರದವರು ಕೈಕೊಂಡಿರುವ ಕ್ರಮಗಳೇನು?

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) :-

ಅ) 200 ಲಕ್ಷ ಟನ್.

ಆ) ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳ ಒಟ್ಟು ಕಬ್ಬು ಅರೆಯುವ ದಿನವಹಿ ಸಾಮರ್ಥ್ಯ 71,959 ಟನ್ ಆಗಿದೆ.

ವಿವರ ಕೆಳಕಂಡಂತಿದೆ :

ಕ್ಷೇತ್ರ	ಕಬ್ಬು ಅರೆಯುವ ಒಟ್ಟು ದಿನವಹಿ ಸಾಮರ್ಥ್ಯ (ಎಂ.ಟಿ.ಗಳಲ್ಲಿ)
ಸಹಕಾರಿ	33250
ಸಾರ್ವಜನಿಕ	7500
ಜಂಟಿ	3750
ಖಾಸಗಿ	27450
ಒಟ್ಟು	71950

ಇ) 1995-96 ನೇ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳ ಕಬ್ಬು ಅರೆಯುವ ಸಾಮರ್ಥ್ಯ ಬಳಕೆ ಶೇ. 95 ಕ್ಕಿಂತ ಹೆಚ್ಚು ಇರುತ್ತದೆ.

ಅತಿ ಹೆಚ್ಚು ಸಾಮರ್ಥ್ಯ ಹೊಂದಿರುವ ಕಾರ್ಖಾನೆಗಳ ಸಂಖ್ಯೆ 4

ಅತಿ ಕಡಿಮೆ ಸಾಮರ್ಥ್ಯ ಹೊಂದಿರುವ ಕಾರ್ಖಾನೆಗಳ ಸಂಖ್ಯೆ 12

ಈ) ರಾಜ್ಯದಿಂದ ಅಂದಾಜು 3.6 ಲಕ್ಷ ಟನ್ ಕಬ್ಬು ಹೊರ ರಾಜ್ಯಕ್ಕೆ ಕಳುಹಿಸಲಾಗಿದೆ. ದಿನಾಂಕ 15-3-96 ಕ್ಕೆ ಅಂದಾಜು ಮಾಡಿದಂತೆ ಸುಮಾರು 10 ಲಕ್ಷ ಟನ್ ನುರಿಸಬೇಕಾದ್ದು ಇದ್ದು ಇನ್ನೂ ನಾಲ್ಕು ಕಾರ್ಖಾನೆಗಳು ಕಬ್ಬು ಸುರಿಸುತ್ತಿವೆ ಹಾಗೂ ನುರಿಸಲಾಗದೆ ಹಾಳಾದ ಕಬ್ಬಿನ ಬಗ್ಗೆ ವರಿದಯಾಗಿರುವುದಿಲ್ಲ. ಸರ್ಕಾರದ ಹಾನಿಯನ್ನು ತುಂಬಿಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :- ಕೈಗಾರಿಕೆಗಳಿಗೆ ನೀಡಲಾಗಿರುವ ಇನ್‌ಸೆಂಟಿವ್ ಮೊತ್ತದ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 831 (1144)

ಶ್ರೀ ಡಿ. ಆರ್. ಪಾಟೀಲ್ (ಗದಗ) :- ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1995-96 ನೇ ಸಾಲಿನಲ್ಲಿ ರಾಜ್ಯದಲ್ಲಿ ಪ್ರಾರಂಭವಾದ ಬೃಹತ್ ಕೈಗಾರಿಕೆಗಳಿಗೆ ನೀಡಲಾದ ಇನ್‌ಸೆಂಟಿವ್ ಮೊತ್ತ ಎಷ್ಟು?

ಆ) ಯಾವ ಬೃಹತ್ ಕೈಗಾರಿಕೆಗೆ ಅತ್ಯಧಿಕ ಪ್ಯಾಕೇಜ್ ಆಫ್ ಇನ್‌ಸೆಂಟಿವ್ ನೀಡಲಾಗಿದೆ; ಹಾಗೂ ಯಾವ ಬೃಹತ್ ಕೈಗಾರಿಕೆಗೆ ಅತ್ಯಂತ ಕಡಿಮೆ ಇನ್‌ಸೆಂಟಿವ್ ನೀಡಲಾಗಿದೆ?

ಇ) ಎಷ್ಟು ವಿದೇಶಿ ಕಂಪನಿಗಳು ರಾಜ್ಯದಲ್ಲಿ ಈ ಅವಧಿಯಲ್ಲಿ ಕಾರ್ಖಾನೆಗಳನ್ನು ಪ್ರಾರಂಭಿಸುವ ಹಾಗೂ ಅವು ಮಾಡಿರುವ ಬಂಡವಾಳ ಎಷ್ಟು?

ಈ) ಈ ವಿದೇಶಿ ಕಂಪನಿಗಳಿಗೆ ಕೊಟ್ಟ ಸವಲತ್ತುಗಳು ಹಾಗೂ ರಿಯಾಯಿತಿಗಳು ಯಾವುವು?

ಉ) ಸ್ವದೇಶಿ ಉದ್ಯಮಗಳಿಗೆ ಹೋಲಿಸಿದರೆ ಈ ಸವಲತ್ತುಗಳಲ್ಲಿ ಯಾವ ವಿಶೇಷತೆ ಇದೆ?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು) :-

ಅ) 1995-96 ನೇ ಸಾಲಿನಲ್ಲಿ ರಾಜ್ಯದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಗೆ ನೀಡಲಾದ ಬಂಡವಾಳ ಸಹಾಯಧನ ಮತ್ತು ರೂ. 7-00 ಕೋಟಿಗಳು.

ಆ) 1995-96 ರ ಸಾಲಿನಲ್ಲಿ ಒಟ್ಟು 9 ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಗರಿಷ್ಠ ರೂ. 25 ಲಕ್ಷ ಸಹಾಯ ಧನವನ್ನು ನೀಡಲಾಗಿದೆ (ಪಟ್ಟಿಯನ್ನು ಲಗತ್ತಿಸಲಾಗಿದೆ.)